**ಪಾಠ–7** **ಆಗಸ್ಟ್ 8–14**

# ದೇವರ ವಾಕ್ಯವನ್ನು ಹಂಚಿಕೊಳ್ಳುವುದು



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಕೀರ್ತನೆ 119:105; ಯೆರೆ 28:29; ಇಬ್ರಿ 1:1–3; 2 ತಿಮೊ 3:14–17; 1 ಯೋಹಾನ 1:7–9; ಪ್ರಸಂಗಿ 3:1,2 ತಿಮೊಥಿ 4:2.

**ಸ್ಮರಣವಾಕ್ಯ : "ಹಾಗೆಯೇ, ನನ್ನ ಬಾಯಿಂದ ಹೊರಟ ಮಾತು ನನ್ನ ಇಷ್ಟಾರ್ಥವನ್ನು ನೆರವೇರಿಸಿ ನಾನು ಉದ್ದೇಶಿಸಿದ್ದನ್ನು ಕೈಗೂಡಿಸಿದ ಹೊರತು ನನ್ನ ಕಡೆಗೆ ವ್ಯರ್ಥವಾಗಿ ಹಿಂದಿರುಗುವುದಿಲ್ಲ** (ಯೆಶಾಯ 55:11).

ನಾನು ಸಾಕ್ಷಿ ಕೊಡುವಾಗ, ನಾನು ಯೇಸುಕ್ರಿಸ್ತನನ್ನು ಕುರಿತು ಮಾತನಾಡುತ್ತೇನೆ. ಆದರೆ ಸತ್ಯವೇದವಿಲ್ಲದಿದ್ದರೆ ಕ್ರಿಸ್ತನ ಬಗ್ಗೆ ನಮಗೆ ಗೊತ್ತಾಗುವುದೇನು? ಮಹಾ ಸಂಘರ್ಷ, ದೇವರ ಪ್ರೀತಿ, ಜನನ, ಜೀವನ, ದೇವರ ಸೇವೆ, ಮರಣ, ಪುನರುತ್ಥಾನ ಮತ್ತು ಕ್ರಿಸ್ತನ ಬರೋಣದ ಬಗ್ಗೆ ಸತ್ಯವೇದವಿಲ್ಲದಿದ್ದರೆ ಅದೆಷ್ಟು ತಾನೇ ನಾವು ತಿಳಿದುಕೊಳ್ಳಬಹುದು?

ಪ್ರಕೃತಿಯು ದೇವರ ಸಾರ್ವಭೌಮತ್ವವನ್ನೂ ಮತ್ತು ಸರ್ವಶಕ್ತತೆಯನ್ನು ಪ್ರಕಟಿಸಿದರೂ, ರಕ್ಷಣೆಯ ಯೋಜನೆಯನ್ನು ಅದರಿಂದ ಪ್ರಕಟಿಸಲಾಗದು. ಪವಿತ್ರಾತ್ಮನ ಮುಖಾಂತರ ನಮಗೆ ತಿಳಿದು ಬರುವುದೇನೆಂದರೆ– "ನಿಜವಾದ ಬೆಳಕು (ಯೇಸು) ಲೋಕಕ್ಕೆ ಬರುವದಾಗಿತ್ತು: ಆ ಬೆಳಕೇ ಪ್ರತಿ ಮನುಷ್ಯನಿಗೂ

* **ಆಗಸ್ಟ್ 15ರ ಸಬ್ಬತ್ತಿಗೆ ಸಿದ್ಧರಾಗಲು ಈ ವಾರದ ಪಾಠವನ್ನು ಓದಿಕೊಳ್ಳಿರಿ.**

ಬೆಳಕನ್ನು ಕೊಡುವಂಥದ್ದು" (ಯೋಹಾನ 1:9). ದೇವರ ವಾಕ್ಯವಿಲ್ಲದೆ ದೈವಿಕ ಸತ್ಯವನ್ನು ಸಂಪೂರ್ಣವಾಗಿ ಪ್ರಕಟಪಡಿಸುವುದು ಪವಿತ್ರಾತ್ಮನಿಂದ ಮಾತ್ರ ಸಾಧ್ಯ. ನಮ್ಮ ಹೃದಯಕ್ಕೆ ಪವಿತ್ರಾತ್ಮನ ಪ್ರಕಟನೆ ಒಂದು ಪರಿಮಿತಿಯಲ್ಲಿರುತ್ತದೆ. ಜೀವಂತ ವಾಕ್ಯವಾದ ಯೇಸುಕ್ರಿಸ್ತನ ಸ್ಪಷ್ಟ ಹಾಗು ಸಂಪೂರ್ಣವಾದ ಪ್ರಕಟನೆ ಆಗುವುದು ದೇವರಿಂದಲೇ ಬರೆಯಲ್ಪಟ್ಟು ದೇವರ ವಾಕ್ಯದಿಂದಲೇ ಅಧ್ಯಯನ ಮಾಡಿದ್ದರೂ, ಧಾರ್ಮಿಕ ನಾಯಕರುಗಳು ದೇವರ ವಾಕ್ಯವನ್ನು ಅಧ್ಯಯನ ಮಾಡಿದ್ದರೂ, ಬಹಳಷ್ಟು ಮಂದಿ ಅದರ ಪ್ರಾಥಮಿಕ ಸಂದೇಶವನ್ನೇ ಕಳೆದುಕೊಂಡು ಬಿಟ್ಟಿದ್ದಾರೆ. ಯೇಸುಸ್ವಾಮಿ– "ಶಾಸ್ತ್ರಗಳಿಂದ ನಿತ್ಯಜೀವವು ದೊರೆಯುತ್ತದೆಂದು ನೀವು ನೆನಸಿ ಅವುಗಳನ್ನು ವಿಚಾರಿಸುತ್ತೀರಲ್ಲಾ; ಅವುಗಳೂ ನನ್ನ ವಿಷಯದಲ್ಲಿ ಸಾಕ್ಷಿ ಕೊಡುವವುಗಳಾಗಿವೆ ಎಂದು ಹೇಳಿದ್ದಾನೆ" (ಯೋಹಾನ 5:29). ಸತ್ಯವೇದದ ಪ್ರತಿ ಬೋಧನೆಯನ್ನು ಸರಿಯಾಗಿ ಅರ್ಥಮಾಡಿಕೊಂಡು ಬಿಟ್ಟರೆ ಅದು ಯೇಸುಕ್ರಿಸ್ತನ ಗುಣದಲ್ಲಿರುವ ಸುಂದರ ಭಾವವನ್ನೇ ವ್ಯಕ್ತಪಡಿಸುತ್ತದೆ. ನಾವು ದೇವರ ವಾಕ್ಯವನ್ನು ಹಂಚಿಕೊಳ್ಳುವಾಗ, ನಮ್ಮ ಪ್ರಾಥಮಿಕ ಗುರಿ; ನಾವು ಹೇಳುವುದೆಲ್ಲ ಸರಿ, ಬೇರೆಯವರು ಹೇಳುವುದೆಲ್ಲ ತಪ್ಪು ಎಂಬುದಾಗಿರಬಾರದು. ನಾವು ಹಂಚಿಕೊಳ್ಳುವ ಪ್ರತಿಯೊಂದು ಸತ್ಯವು ಕ್ರಿಸ್ತನನ್ನು ಪ್ರಕಟಿಸುವಂತಿರಬೇಕು.

**ಭಾನುವಾರ** **ಆಗಸ್ಟ್ 9**

## ದೇವರ ವಾಕ್ಯದ ಸಂಕೇತಗಳು

ಕೀರ್ತನೆ 119:105; ಯೆರೆಮೀಯ 23:29; ಲೂಕ 8:11; ಮತ್ತು ಮತ್ತಾಯ 4:4ನ್ನು ಓದಿಕೊಳ್ಳಿರಿ. ಈ ವೇದಭಾಗದಲ್ಲಿ ದೇವರ ವಾಕ್ಯವನ್ನು ವರ್ಣಿಸಲು ಉಪಯೋಗಿಸಿದ ಆ ಐದು ಸಂಕೇತಗಳಾವುವು? ದೇವರ ವಾಕ್ಯವನ್ನು ಪ್ರತಿನಿಧಿಸಲು ಆ ಐದು ಸಂಕೇತಗಳನ್ನು ಆಯ್ದುಕೊಂಡಿರುವುದೇಕೆ?

ಈ ವೇದಭಾಗಗಳಲ್ಲಿ ಬಳಸಲಾಗಿರುವ ವಿವಿಧ ಸಂಕೇತಗಳು ದೇವರ ವಾಕ್ಯದ ಪ್ರಾಥಮಿಕ ಕಾರ್ಯಗಳನ್ನು ವಿವರಿಸುತ್ತವೆ. ನಾವು ಬೇರೆಯವರೊಂದಿಗೆ

ಧರ್ಮಶಾಸ್ತ್ರವನ್ನು ಕುರಿತು ಮಾತನಾಡಿದಾಗ, ಅದು ಅವರ ಬಾಳಿನಲ್ಲಿ ಒಂದು ಬೆಳಕಾಗಿ ಹೊಳೆಯುತ್ತದೆ. ದೇವರು ಯಾರು ಮತ್ತು ಆತನ ಗುಣನಡತೆಯ ಪ್ರಕೃತಿಯೇನು ಎಂಬುದನ್ನು ಅಪಾರ್ಥ ಮಾಡಿಕೊಂಡು ಜೀವನವನ್ನು ಅಂಧಕಾರ ಮಾಡಿಕೊಂಡವರ ಜೀವನಕ್ಕೆ ಬೆಳಕು ಕೊಡುವಾತನೇ– ಯೇಸು. ಆದ್ದರಿಂದಲೇ ಆತನನ್ನು "**ಲೋಕಕ್ಕೆ ಬೆಳಕು**" ಎಂದು ಕರೆದಿರುವರು. ದೇವರ ವಿಷಯದಲ್ಲಿ ಅಪಾರ್ಥ ಮಾಡಿಕೊಂಡವರ ಮನಸ್ಸಿಗೆ ಕತ್ತಲೆಯ ಗವಿಯನ್ನು ದೇವರ ವಾಕ್ಯವೆಂಬ ಬೆಳಕಿನಿಂದ ಪವಿತ್ರಾತ್ಮ ದೇವರು ಬೆಳಗುವಂತೆ ಮಾಡುವನು.

ದೇವರ ವಾಕ್ಯ ಬೀಜವಿದ್ದಂತೆ. ಬೀಜದ ಮುಖ್ಯಗುಣ ಜೀವ ಕೊಡುವಿಕೆ. ಬೀಜವು ಬೆಳೆಯಲು ಸಮಯ ತೆಗೆದುಕೊಳ್ಳುತ್ತದೆ. ಎಲ್ಲ ಬೀಜಗಳು ಒಮ್ಮೆಗೆ ಮೊಳಕೆ ಒಡೆಯುವುದಿಲ್ಲ. ಎಲ್ಲಾ ಗಿಡಗಳು ಒಂದೇ ವೇಗದಲ್ಲಿ ಬೆಳೆಯುವುದೂ ಇಲ್ಲ. ಸರಿಯಾದ ಹವಾಗುಣವಿದ್ದಾಗ, ಬೀಜದೊಳಗಿರುವ ಜೀವ ಪುಟನೆಗೆದು, ಭೂಮಿಯನ್ನು ಸೀಳಿ, ಹೊಸದಾಗಿ ಹುಟ್ಟುತ್ತದೆ. ನಾವು ದೇವರ ವಾಕ್ಯವೆಂಬ ಬೀಜವನ್ನು ಮನುಷ್ಯರ ಹೃದಯದಲ್ಲಿಯೂ ಮತ್ತು ಮನಸ್ಸಿನಲ್ಲಿಯೂ ನೆಟ್ಟಾಗ, ತತ್‌ಕ್ಷಣ ಅದರ ಫಲಿತಾಂಶವನ್ನು ಕಾಣಲಾಗದು, ಆದರೆ ಮೌನವಾಗಿ ಬೀಜ ಬೆಳೆಯುತ್ತಿರುತ್ತದೆ, ದೇವರು ಗೊತ್ತು ಮಾಡಿದ ಸಮಯದಲ್ಲಿ, ಅವರು ಪವಿತ್ರಾತ್ಮನ ಪ್ರೇರೇಪಣೆಗೆ ಪ್ರತಿಕ್ರಿಯಿಸಿದಾಗ, ಅದು ದೇವರ ರಾಜ್ಯಕ್ಕೆ ಸುಗ್ಗಿಯನ್ನುಂಟು ಮಾಡುತ್ತದೆ.

ಯೇಸುಕ್ರಿಸ್ತನು ತನ್ನ ವಾಕ್ಯವನ್ನು ಪೋಷಣೆ ಕೊಡುವ ರೊಟ್ಟಿಗೆ ಹೋಲಿಸಿರುವನು. ನಮಗೆಲ್ಲರಿಗೆ ಗೊತ್ತಿರುವ ಹಾಗೆ, ಕೆಲವು ಸಂಗತಿಗಳು ಮಾತ್ರ ರೊಟ್ಟಿಯಷ್ಟೇ ಒಳ್ಳೇ ರುಚಿ–ಶುಚಿಯಾಗಿದ್ದು, ಸಂತೃಪ್ತಿಯನ್ನುಂಟು ಮಾಡಬಲ್ಲವು. ದೇವರ ವಾಕ್ಯ ಆತ್ಮದ ಹಸಿವನ್ನು ತಣಿಸುವುದು ಮತ್ತು ನಮ್ಮ ಆಂತರ್ಯದ ಆಧ್ಯಾತ್ಮಿಕ ಹಂಬಲವನ್ನು ಪೋಷಣೆ ಮಾಡುವುದು. ವಾಕ್ಯ ಮಾಡುವ ವಾಗ್ದಾನಗಳನ್ನು ಇತರರೊಂದಿಗೆ ಹಂಚಿಕೊಳ್ಳುವಾಗ ಮತ್ತು ಕ್ರಿಸ್ತನೇ ಆ ವಾಕ್ಯ ಎಂಬುದನ್ನು ಕಂಡುಕೊಂಡಾಗ, ಅವರ ಜೀವನ, ಆತನ ಪ್ರೀತಿಯಿಂದ ಮುದಗೊಂಡು, ಆತನ ಕೃಪೆಯಿಂದ ವಿಸ್ಮಯಗೊಂಡು, ಮತ್ತು ಆತನ ಪ್ರಸನ್ನತೆಯಿಂದ ಸಂತೃಪ್ತಗೊಂಡು, ಮಾರ್ಪಾಡಿಗೆ ಒಳಗಾಗುವುದು.

ಸತ್ಯವೇದದಿಂದ ಕಲಿತ ಸತ್ಯಗಳನ್ನು ಕುರಿತು ಮಾತ್ರ ಚಿಂತನೆ ನಡೆಸಿರಿ. ಆ ಸತ್ಯ ನಮಗೆ ಏನನ್ನು ಬೋಧಿಸುತ್ತದೋ ಅದನ್ನು ನಾವು ಹೇಗೆ ಸಂರಕ್ಷಿಸಬೇಕು ಎಂಬ ವಿಷಯದಲ್ಲಿ, ನಾವು ಮಾಡಿದ ಚಿಂತನೆ, ನಮಗೆ ತಿಳಿಸುವುದೇನು?

**ಸೋಮವಾರ** **ಆಗಸ್ಟ್ 10**

## ದೇವರ ವಾಕ್ಯದ ಸೃಷ್ಟಿಯ ಶಕ್ತಿ

ಇಬ್ರಿಯ 1:1–3; ಇಬ್ರಿಯ 4:12 ಮತ್ತು ಕೀರ್ತನೆ 33:6,9 ನ್ನು ಹೋಲಿಸಿ ನೋಡಿರಿ. ಸತ್ಯವೇದದ ಈ ಭಾಗಗಳು ದೇವರ ವಾಕ್ಯದ ಶಕ್ತಿಯನ್ನು ಕುರಿತು ನಮಗೆ ಹೇಳುವುದೇನು?

ದೇವರ ವಾಕ್ಯ ಸಜೀವ ವಾಕ್ಯ. ತಾನು ಹೇಳುವುದನ್ನು ಸಾಧಿಸಲು ಬೇಕಾದ ಶಕ್ತಿಯನ್ನು ಅದು ತನ್ನೊಂದಿಗೆ ಹೊತ್ತುಕೊಂಡೇ ನಡೆಯುತ್ತಿರುತ್ತದೆ. ಮಾನವನ ಮಾತುಗಳು, ಇರುವ ಸಂಗತಿಯನ್ನು ಕುರಿತು ಮಾತ್ರ ಮಾತನಾಡುತ್ತವೆ. ಆದರೆ ದೇವರ ಮಾತುಗಳು ಮುಂದೆ ನಡೆಯಲಿರುವುದನ್ನು ಕುರಿತು ಮಾತನಾಡುತ್ತವೆ. ತನ್ನ ವಾಕ್ಯದಿಂದಲೇ ಆತನು ಎಲ್ಲವನ್ನು ಸೃಷ್ಟಿಮಾಡಲು ಶಕ್ತನಾಗಿದ್ದಾನೆ. ದೇವರ ವಾಕ್ಯ ಸೃಜನಾತ್ಮಕ ವಾಕ್ಯ. ದೇವರ ಬಾಯಿಂದ ಹೊರಡುವ ಪ್ರತಿ ಮಾತು ಏನನ್ನು ಹೇಳುತ್ತದೆಯೋ, ಅದನ್ನು ಸೃಷ್ಟಿಸುವ ಶಕ್ತಿಯೂ ಅದಕ್ಕಿದೆ.

ಆದಿಕಾಂಡ ಪುಸ್ತಕದ ಒಂದನೇ ಅಧ್ಯಾಯದಲ್ಲಿ, "**ದೇವರು ಹೇಳಿದನು**" ಎಂಬ ಅಭಿವ್ಯಕ್ತಿಯನ್ನು ಮತ್ತೆ ಮತ್ತೆ ಪುನರುಚ್ಚರಿಸಲಾಗಿದೆ (ಆ.ಕಾ. 1:3,6,11, 14, 20,24,26,29). ದೇವರ ಪ್ರಕಟನೆಯ ಮಾತುಗಳಿಗೆ ಅದೆಷ್ಟು ಶಕ್ತಿಯಿತ್ತೆಂದರೆ, ಆತನು ಮಾತನಾಡಿ ಆ ಕ್ಷಣದಲ್ಲಿ ಒಣನೆಲವೂ, ಅದರಲ್ಲಿ ಕಾಯಿಪಲ್ಯಗಳೂ ಹುಟ್ಟಿಬಂದವು, ಹೂಗಳು ಅರಳಿದವು, ಹಣ್ಣಿನ ಮರಗಳು ಹುಲುಸಾಗಿ ಬೆಳೆದು ಬಂದವು ಮತ್ತು ಪ್ರಾಣಿಗಳು ಥಟ್ಟನೆ ಹುಟ್ಟಿ ಬಂದಿದ್ದವು.

ದೇವರ ಸೃಷ್ಟಿಯ ಕಾರ್ಯವನ್ನು ವಿವರಿಸಲು ಅತ್ಯಂತ ಮನೋಹರವಾದ ಇಬ್ರಿಯ ಭಾಷೆಯ ಒಂದು ಪದವನ್ನು ಬಳಸಲಾಗಿದೆ. ಆ ಪದವೇ "**ಬರ**". ಈ ಪದ ತನ್ನ ವಿಶಿಷ್ಟ ರೂಪದಲ್ಲಿ, ದೇವರು ಶೂನ್ಯದಲ್ಲಿ, ಅಂದರೆ ಏನೂ ಇಲ್ಲದ ಸ್ಥಳದಲ್ಲಿ ಆತನ ಸೃಷ್ಟಿ ಮಾಡುವ ಶಕ್ತಿಯನ್ನು ವರ್ಣಿಸಲು ಆ ಪದವನ್ನು ಬಳಸಲಾಗಿದೆ. ಈ ಪದವನ್ನು ದೇವರು ಕರ್ತೃವಾಗಿದ್ದಾಗ ಮಾತ್ರ ಉಪಯೋಗಿಸಬೇಕು. ಅಂದರೆ : ದೇವರು ಒಬ್ಬನು ಮಾತ್ರವೇ " "ಬರ" ಮತ್ತು ಆತನ ಮಾತುಗಳಿಂದಲೇ, ಆತನ ಎಲ್ಲವನ್ನೂ ಸೃಷ್ಟಿಸಬಲ್ಲನು.

ದೇವರು ತನ್ನ ಮಾತಿನ ಶಕ್ತಿಯಿಂದ, ಈ ಲೋಕವನ್ನು ಸೃಷ್ಟಿ ಮಾಡಿದ್ದು ಮಾತ್ರವಲ್ಲ, ಆತ ಈ ಲೋಕವನ್ನು ಸಂರಕ್ಷಿಸುವವನೂ ಆಗಿದ್ದಾನೆ ಮತ್ತು ತನ್ನ ವಾಕ್ಯಕ್ಕನುಸಾರ ಲೋಕವನ್ನು ಎತ್ತಿ ಹಿಡಿಯುವವನೂ ಆಗಿದ್ದಾನೆ. ಆತನ ಆಡುಮಾತಿಗೆ ಎಷ್ಟು ಶಕ್ತಿಯಿದೆಯೋ, ಅಷ್ಟೇ ಶಕ್ತಿ ಆತನ ಬರಹ ರೂಪದ ವಾಕ್ಯಕ್ಕೂ ಇದೆ. ಯಾವ ಪವಿತ್ರಾತ್ಮನು ಈ ಲೋಕದ ಸೃಷ್ಟಿಯಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಿದ್ದನೋ ಅದೇ ಪವಿತ್ರಾತ್ಮನು ಧರ್ಮಶಾಸ್ತ್ರದ ಬರವಣಿಗೆಗೂ ಸ್ಫೂರ್ತಿ ಕೊಟ್ಟಿದ್ದಾನೆ. ನಾವು ಸತ್ಯವೇದ ಓದುವಾಗ ನಮ್ಮೊಂದಿಗಿರುವ ಪವಿತ್ರಾತ್ಮನು ಓದಿದ್ದನು ಇನ್ನೊಬ್ಬರೊಂದಿಗೆ ಹಂಚಿಕೊಳ್ಳುವಾಗಲೂ ಆತನು ನಮ್ಮೊಂದಿಗಿರುತ್ತಾನೆ. ಸೃಷ್ಟಿ ಮಾಡುವ ಶಕ್ತಿಯಿರುವ ವಾಕ್ಯಕ್ಕೆ ಜೀವಕೊಡುವ ಮತ್ತು ಜೀವನದನ್ನು ಬದಲಾಯಿಸುವ ಶಕ್ತಿಯೂ ಇದೆ. "ಲೋಕವನ್ನು ಅಸ್ತಿತ್ವಕ್ಕೆ ಬರಲು ಕೆಲಸ ಮಾಡಿದ ಸೃಷ್ಟಿಯ ಶಕ್ತಿ ದೇವರ ವಾಕ್ಯದಲ್ಲೂ ಇದೆ. ಈ ವಾಕ್ಯಶಕ್ತಿಯನ್ನೂ ಕೊಡುತ್ತದೆ; ಜೀವವನ್ನೂ ಕೊಡುತ್ತದೆ. ಪ್ರತಿಯೊಂದು ಆಜ್ಞೆಯೂ ವಾಗ್ದಾನವೇ. ಚಿತ್ತಾನುಸಾರ ಅಂಗೀಕಾರವಾಗುತ್ತದೆ, ಆತ್ಮದಿಂದ ಸ್ವೀಕಾರವಾಗುತ್ತದೆ. ನಿತ್ಯಾತ್ಮನಿಂದ ಜೀವವನ್ನು ತರುತ್ತದೆ. ಮಾನವ ಪ್ರಕೃತಿಯನ್ನು ಮಾರ್ಪಾಟಿಗೆ ತರುತ್ತದೆ ಮತ್ತು ಆತ್ಮವನ್ನು ದೇವರ ಸ್ವರೂಪಕ್ಕೆ ತರಲು ಮತ್ತೇ ಸೃಷ್ಟಿಕಾರ್ಯ ಆರಂಭಿಸುತ್ತದೆ"– ಎಲೆನ್ ಜಿ ವೈಟ್, ಎಜುಕೇಷನ್, ಪುಟ 126.

ದೇವರ ವಾಕ್ಯದಲ್ಲಿರುವ ವಾಗ್ದಾನಗಳನ್ನು ವೈಯುಕ್ತಿಕವಾಗಿ ನಾವು ಗ್ರಹಿಸಿಕೊಂಡಾಗ, ನಮ್ಮ ಬದುಕುಗಳು ಬದಲಾಗುತ್ತವೆ ಮತ್ತು ಇತರರಿಗೂ ಆ

ಆಶ್ಚರ್ಯಕರ ವಾಗ್ದಾನಗಳನ್ನು ಗ್ರಹಿಸಿಕೊಳ್ಳಲು ಸಹಾಯ ಮಾಡಿದಾಗ, ಪವಿತ್ರಾತ್ಮನು ಅವರ ಜೀವನದಲ್ಲಿ ಬದಲಾವಣೆಯನ್ನುಂಟು ಮಾಡುತ್ತಾನೆ.

**ಕಲ್ಪಿಸಿಕೊಳ್ಳಿರಿ: ದೇವರು ಮಾತಾಡಿದನು. ಆತನು ಮಾತಾಡಿದ್ದಂತೆಯೇ ಆಯಿತು. ಈ ವಾಕ್ಯಗಳ ಅರ್ಥವನ್ನು ನಾವು ಗ್ರಹಿಸುವುದು ಹೇಗೆ? ಆತನ ಶಕ್ತಿಯನ್ನು ಕುರಿತು ಈ ವಿಸ್ಮಯಕಾರಿ ವಾಸ್ತವತೆ ಹೇಳುವುದೇನು? ದೇವರ ಸೃಷ್ಟಿಯ ಶಕ್ತಿಯ ಕುರಿತು ಸತ್ಯ ನಮಗೆ ನೆಮ್ಮದಿ ಕೊಡುವುದು ಹೇಗೆ?**

**ಮಂಗಳವಾರ** **ಆಗಸ್ಟ್ 11**

## ದೇವರ ವಾಕ್ಯ ಅಧ್ಯಯನದ ಲಾಭಗಳು

ದೇವರ ವಾಕ್ಯವನ್ನು ಅಧ್ಯಯನ ಮಾಡುವುದರಿಂದ ಅನೇಕ ಪ್ರಯೋಜನಗಳಾಗುತ್ತವೆ. ಅಪೊಸ್ತಲನಾದ ಪೇತ್ರನು ಧರ್ಮಶಾಸ್ತ್ರದ ವಾಗ್ದಾನಗಳ ಮುಖಾಂತರ ನಾವು– "**ದೈವಸ್ವಭಾವದಲ್ಲಿ ಪಾಲನ್ನು ಹೊಂದುವವರಾಗಬೇಕೆಂದು**" ಹೇಳಿದ್ದಾನೆ (2 ಪೇತ್ರ 1:4). ಪೌಲ– "**ಮನಸ್ಸಿನೊಳಗೆ ಬೇರೂರಿರುವ ವಾಕ್ಯಕ್ಕೆ ನಮ್ರತೆಯಿಂದ ಎಡೆಗೊಡಿರಿ; ಅದು ನಿಮ್ಮ ಆತ್ಮಗಳನ್ನು ರಕ್ಷಿಸುವುದಕ್ಕೆ ಸಾಮರ್ಥ್ಯವುಳ್ಳದ್ದಾಗಿದೆ**" ಎಂದು ಹೇಳಿದ್ದಾನೆ. ಅಲ್ಲದೆ ಇದರ ಜೊತೆಗೆ ಪೌಲನು– "**ನಾನೀಗ ನಿಮ್ಮನ್ನು ಕರ್ತನಿಗೂ ಆತನ ಕೃಪಾವಾಕ್ಯಕ್ಕೂ ಒಪ್ಪಿಸಿಕೊಡುತ್ತೇನೆ. ಆತನು ನಿಮ್ಮಲ್ಲಿ ಭಕ್ತಿವೃದ್ಧಿಯನ್ನುಂಟು ಮಾಡುವುದಕ್ಕೂ ಪವಿತ್ರರಾದವರೆಲ್ಲರಲ್ಲಿ ನಿಮಗೆ ಹಕ್ಕನ್ನು ಅನುಗ್ರಹಿಸುವುದಕ್ಕೂ ಶಕ್ತನಾಗಿದ್ದಾನೆ**" ಎಂದು ಹೇಳಿದ್ದಾನೆ (ಅ.ಕೃ 20:32). ಸತ್ಯವೇದಕ್ಕೆ ವಿಮೋಚನೆಯನ್ನುಂಟು ಮಾಡುವ ಉದ್ದೇಶವಿದೆ. ಸತ್ಯವೇದದ ತುಂಬಾ ತುಂಬಿರುವ ಕ್ರಿಸ್ತನ ನಡೆ ನೋಡಿ, ನಾವು ಬದಲಾಗುತ್ತೇವೆ.

"**ಕರ್ತನ ಪ್ರಭಾವವನ್ನು ದೃಷ್ಟಿಸುವವರಾಗಿದ್ದು....... ಆ ಪ್ರಭಾವದ ಸಾರೂಪ್ಯ ಉಳ್ಳವರೇ ಆಗುತ್ತೇವೆ**" (2 ಕೊರಿಂಥ 3:18). ಬೌದ್ಧಿಕ ಮತ್ತು ಆಧ್ಯಾತ್ಮಿಕ ಪ್ರಕೃತಿಯ ನಿಯಮವೇನೆಂದರೆ : ದೃಷ್ಟಿಸುತ್ತಿದ್ದರೆ ನಾವು ಬದಲಾಗುತ್ತೇವೆ. ಯಾವ ವ್ಯಕ್ತಿಯೊಂದಿಗೆ ಬಹಳ ಸಮಯ ಕಳೆಯುತ್ತೇವೆಯೋ, ಕ್ರಮೇಣವಾಗಿ ಆ ವ್ಯಕ್ತಿಯನ್ನು ಅನುಕರಿಸಲು ಮುಂದಾಗುತ್ತೇವೆ. ಮನಸ್ಸು ತಾನಾಗಿಯೇ

ಹೊಸ ಪರಿಸರಕ್ಕೆ ಹೊಂದಿಕೊಂಡು ಬಿಡುತ್ತದೆ" – ಎಲೆನ್ ಜಿ ವೈಟ್, ದಿ ಗ್ರೇಟ್ ಕಾಂಟ್ರೊವರ್ಸಿ, ಪುಟ 555.

2 ತಿಮೊಥಿ 3:14–17 ಮತ್ತು ಯೋಹಾನ 17:14–17ನ್ನು ಓದಿರಿ. ದೇವರ ವಾಕ್ಯವನ್ನು ಓದುವುದರಿಂದ ನಮಗಾಗುವ ಹೆಚ್ಚಿನ ಅನುಕೂಲಗಳಾವುವು?

______________________________

______________________________

ಪೌಲ, ತನ್ನ ಸಂಗಡಿಗನಾದ ತಿಮೊಥಿಯನಿಗೆ ಬರೆಯುತ್ತಾ, ಅವನು ಧರ್ಮಶಾಸ್ತ್ರವನ್ನು ಶ್ರದ್ಧೆಯಿಂದ ಓದಬೇಕು ಎಂದು ಹೇಳುತ್ತಾನೆ. ಸ್ಫೂರ್ತಿದಾಯಕ ವಾಕ್ಯಗಳ ಅಧ್ಯಯನದ ಫಲಿತಾಂಶವನ್ನು ಇತರರೊಂದಿಗೆ ಹಂಚಿಕೊಳ್ಳಬೇಕೆಂದೂ ಸಹ ಹೇಳಿದ್ದಾನೆ. ಪೌಲನ ಪ್ರಕಾರ, ಸತ್ಯವೇದವು ತಿದ್ದುಪಾಟಿಗೂ.... ಉಪಯುಕ್ತವಾಗಿದೆ. ಸತ್ಯವೇದ, ಸತ್ಯವನ್ನು ಪ್ರಕಟಿಸುತ್ತದೆ ಮತ್ತು ತಪ್ಪನ್ನು ಎತ್ತಿ ತೋರಿಸುತ್ತದೆ. ದೇವರು ಮಾನವನಿಗೆ ಹಾಕಿಕೊಂಡಿರುವ ಯೋಜನೆಯ ವಿನ್ಯಾಸವನ್ನು ಬಿಡಿಸಿ ತೋರಿಸುತ್ತದೆ. ನಮ್ಮ ಪಾಪಗಳನ್ನು ಅದು ದೂಷಿಸುತ್ತದೆ. ನಮ್ಮ ತಪ್ಪಾದ ಆಲೋಚನೆಗಳನ್ನು ಸರಿಪಡಿಸುತ್ತದೆ, ಮತ್ತು ಕ್ರಿಸ್ತನ ನೀತಿಯಲ್ಲಿ ನಡೆಯಲು ಉಪದೇಶಿಸುತ್ತದೆ. ನಮ್ಮ ಸ್ವ–ಕೇಂದ್ರಿತ ಪ್ರೀತಿಯೊಂದಿಗೆ ಕ್ರಿಸ್ತನ ನಿಸ್ವಾರ್ಥ ಪ್ರೀತಿಯನ್ನು ಹೋಲಿಸಿ ನೋಡಿದರೆ ನಾವು ಗರಬಡಿದವರಂತೆ ನಿಂತುಕೊಂಡು ಬಿಡಬಹುದು. ಸತ್ಯವೇದದಲ್ಲಿ ಆತನ ಆಳವಾದ ಅನುಕಂಪ ಮತ್ತು ನಮ್ಮನ್ನು ಹಾರೈಸುವಿಕೆಯನ್ನು ನೋಡುತ್ತಲೇ ಇದ್ದರೆ, ನಮ್ಮ ಜೀವಗಳು ಬದಲಾವಣೆಗೆ ಒಳಗಾಗುತ್ತಿರುತ್ತವೆ. ನಾವು ಇತರರೊಂದಿಗೆ ಆತನ ವಾಕ್ಯವನ್ನು ಹಂಚಿಕೊಳ್ಳುವಾಗ, ಅವರೂ ಸಹ ಆಮೂಲಾಗ್ರವಾಗಿ ಮಾರ್ಪಡುವರು. ಕ್ರಿಸ್ತನ ವಾಕ್ಯದ ಮುಖಾಂತರ ನಾವು ಆತನನ್ನೇ ದೃಷ್ಟಿಸಿನೋಡುತ್ತಿದ್ದರೆ, ನಾವು ಆತನ ಹಾಗೆ ಆಗುವೆವು. ಸಾಕ್ಷಿ ಕೊಡುವುದೆಂದರೆ ನಾವು ಏನು ಆಲೋಚನೆ ಮಾಡುತ್ತಿದ್ದೇವೆಯೋ ಅಥವಾ ನಾವು ಏನು ನಂಬುತ್ತೇವೆಯೋ ಅದನ್ನು ಅವರೊಂದಿಗೆ ಹಂಚಿಕೊಳ್ಳುವುದಲ್ಲ. ದೇವರ ವಾಕ್ಯದಲ್ಲಿ ಕಂಡುಕೊಂಡ ನಿತ್ಯಸತ್ಯಗಳನ್ನು ಹಂಚಿಕೊಳ್ಳುವುದೇ ಸಾಕ್ಷಿ ಕೊಡುವುದು. ದೇವರವಾಕ್ಯವು

ನಂಬಲಿಕ್ಕಾಗದಷ್ಟು ರೀತಿಯಲ್ಲಿ ನಮ್ಮ ಜೀವನಗಳನ್ನು ಆಶೀರ್ವದಿಸಿದೆ. ಇತರರನ್ನೂ ದೇವರ ವಾಕ್ಯ ಆಶೀರ್ವದಿಸಬಲ್ಲದು ಎಂಬುದಕ್ಕೆ ನಮ್ಮಲ್ಲಿ ಬೇಕಾದಷ್ಟು ವಿಶ್ವಾಸಾರ್ಹತೆಯಿದೆ.

ನೀವು ವೈಯಕ್ತಿಕವಾಗಿ ಎದುರಿಸಿದ ಕಷ್ಟವನ್ನು ನೆನಪಿಸಿಕೊಳ್ಳಿ. ದೇವರ ವಾಕ್ಯ ನಿಮ್ಮನ್ನು ಈ ಸಂದರ್ಭದಲ್ಲಿ ಬಲಪಡಿಸಿದ್ದು ಹೇಗೆ? ಇಂಥಹ ಅನುಭವದಿಂದ ನೀವು ಕಲಿತ್ತದ್ದೇನು?

**ಬುಧವಾರ** **ಆಗಸ್ಟ್ 12**

## ದೇವರ ವಾಕ್ಯವನ್ನು ಅನ್ವಯ ಮಾಡುವುದು

ಯಾರೋ ಒಬ್ಬರು ದೇವರ ವಾಕ್ಯದಲ್ಲಿ ಮೂರು ಸಾವಿರಕ್ಕಿಂತಲೂ ಹೆಚ್ಚಿನ ದೇವರ ವಾಗ್ದಾನಗಳಿವೆಯೆಂದು ಲೆಖ್ಖ ಹಾಕಿದ್ದಾರೆ. ಈ ವಾಗ್ದಾನಗಳಲ್ಲಿ ಪ್ರತಿಯೊಂದು ವಾಗ್ದಾನವೂ ಪ್ರೀತಿಮಯನಾದ ದೇವರ ಹೃದಯದಿಂದ ಬಂದಿರುತ್ತದೆ. ಅಂತಹ ಪ್ರೀತಿಮಯನಾದ ದೇವರನ್ನು ಕುರಿತು, ಪೌಲನು– **"ನಮ್ಮಲ್ಲಿ ಕಾರ್ಯಸಾಧಿಸುವ ತನ್ನ ಶಕ್ತಿಯ ಪ್ರಕಾರ ನಾವು ಬೇಡುವುದಕ್ಕಿಂತಲೂ ಯೋಚಿಸುವಂತಕ್ಕಿಂತಲೂ ಅತ್ಯಧಿಕವಾದದ್ದನ್ನು ಮಾಡಲು ಶಕ್ತನಾದ ದೇವರಿಗೆ ಸಭೆಯಲ್ಲಿಯೂ ಕ್ರಿಸ್ತ ಯೇಸುವಿನಲ್ಲಿಯೂ ತಲಾತಲಾಂತರಕ್ಕೂ ಯುಗಯುಗಾಂತರಕ್ಕೂ ಸ್ತೋತ್ರ, ಆಮೆನ್"** ಎಂದು ಹೇಳಿದ್ದಾನೆ (ಎಫೆಸ 3:20). ದೇವರ ವಾಗ್ದಾನಗಳೆಂದರೆ, ಆತನು ನಮ್ಮಲ್ಲಿ ಪ್ರತಿಯೊಬ್ಬರಿಗೂ ಮಾಡುವ ವಚನಬದ್ಧತೆಯೇ ಆಗಿದೆ. ಯಾವಾಗ ಈ ವಾಗ್ದಾನಗಳು ನಮ್ಮದಾಗಬೇಕು ಎಂದು ಹಕ್ಕಿನಿಂದ ನಾವು ದೇವರಲ್ಲಿ ಬೇಡುತ್ತೇವೆಯೋ ಮತ್ತು ಇತರರು ಬೇಡಿಕೊಳ್ಳುವಂತೆ ಹೇಳಿಕೊಡುತ್ತೇವೆಯೋ, ಆಗ ಪರಲೋಕದಿಂದ ಆಶೀರ್ವಾದಗಳು ಹರಿದು ಬರುವವು. ಅಪೋಸ್ತಲನಾದ ಪೌಲನು ಈ ವಾಸ್ತವಿಕತೆಯನ್ನು ರೋಮಾಪುರದವರಿಗೆ ಬರೆದ ಪತ್ರಿಕೆಯ 8ನೇ ಅಧ್ಯಾಯದಲ್ಲಿ ಹೀಗೆ ಒತ್ತಿ ಹೇಳಿದ್ದಾನೆ. **"ಸ್ವಂತ ಮಗನನ್ನು ಉಳಿಸಿಕೊಳ್ಳದೆ ಆತನನ್ನು ನಮ್ಮೆಲ್ಲರಿಗೋಸ್ಕರ ಒಪ್ಪಿಸಿಕೊಟ್ಟನಲ್ಲಾ; ಮಗನನ್ನು ಕೊಟ್ಟ ಮೇಲೆ ಸಮಸ್ತವನ್ನೂ ನಮಗೆ ದಯಪಾಲಿಸದೆ ಇರುವನೇ?"** (ರೋಮಾ 8:32). ಅಪೋಸ್ತಲನಾದ

ಪೇತ್ರನು ಈ ವಾಗ್ದಾನವನ್ನು ವಿಶದೀಕರಿಸುತ್ತಾ ಹೀಗೆ ಹೇಳುತ್ತಾನೆ– "...... **ದೇವರ ವಿಷಯವಾಗಿ ಯೇಸುವಿನ ದಿವ್ಯಶಕ್ತಿಯು ನಮಗೆ ಪರಿಜ್ಞಾನವನ್ನು ಕೊಟ್ಟಿದ್ದರಲ್ಲಿ ಜೀವಕ್ಕೂ ಭಕ್ತಿಗೂ ಬೇಕಾದದ್ದೆಲ್ಲವೂ ದೊರೆಯಿತೆಂದು ಬಲ್ಲೆವಷ್ಟೆ**". ಕ್ರಿಸ್ತನು ಶಿಲುಬೆಯ ಮೇಲೆ ಮರಣಿಸುವ ಮುಖಾಂತರ, ನರಕದ ಯಾರ ಸೈತಾನನ ಶಕ್ತಿಯ ವಿರುದ್ಧ ವಿಜಯೀಶಾಲಿಯಾಗಿದ್ದಾನೆ. ಒಂದು ದೈವೀಕ ಆಧ್ಯಾತ್ಮಿಕ ಜೀವನಕ್ಕೆ ಬೇಕಾದದ್ದೆನ್ನೆಲ್ಲಾ ಆತನು ನಮಗೆ ಪೂರೈಸಿದ್ದಾನೆ. ನಮ್ಮ ದೈಹಿಕ ಕೊರತೆಗಳನ್ನು ಪೂರೈಸುವ ವಿಷಯದಲ್ಲಿ ಆತನು ವಾಗ್ದಾನ ಮಾಡಿರುವನು.

**1 ಯೋಹಾನ 1:7–9 ಮತ್ತು ಫಿಲಿಪ್ಪಿ 4:13,19ನ್ನು ಹೋಲಿಸಿ ನೋಡಿರಿ. ಈ ವಾಗ್ದಾನಗಳು ಸ್ವಲ್ಪ ಭಿನ್ನವಾಗಿದ್ದರೂ, ಇವು ದೇವರ ಗುಣವನ್ನು ಕುರಿತು ಏನು ಹೇಳಿಕೊಡುತ್ತವೆ? ಈ ವಾಗ್ದಾನಗಳು ನಿಮ್ಮ ಜೀವನದ ಮೇಲೆ ಉಂಟುಮಾಡಿರುವ ಪರಿಣಾಮವೇನು?**

---

---

ಈ ವೇದಭಾಗದಲ್ಲಿ ನಾವು ಓದುವ ವಾಗ್ದಾನಗಳಲ್ಲಿ ಪ್ರತಿಯೊಂದು ಭಿನ್ನವಾದ ವಿಷಯಗಳನ್ನು ಕುರಿತು ಮಾತನಾಡಿದರೂ, ದೇವರನ್ನು ಕುರಿತು ಅವು ಕೊಡುವ ಚಿತ್ರಣ ಒಂದೇ : ಪ್ರೀತಿಸುವ ಕ್ಷಮಾಗುಣದ, ಅಪರಿಮಿತ ಶಕ್ತಿಯ, ನಮ್ಮ ಮೂಲಭೂತ ಅವಶ್ಯಕತೆಗಳ ಪೂರೈಸುವ ದೇವರಾತನೆಂದು ಈ ವಾಗ್ದಾನಗಳು ಪ್ರಕಟಿಸುತ್ತಿವೆ. ದೇವರು ನಮ್ಮ ಪರಿಪಾಲನೆಯನ್ನು ಗಂಭೀರವಾಗಿ ಪರಿಗಣಿಸಿದ್ದಾನೆ ಎಂಬ ಭರವಸೆಯನ್ನು ಅವು ಮೂಡಿಸುತ್ತವೆ.

**ಇಬ್ರಿಯ 3:19; 4–13 ಮತ್ತು ಮತ್ತಾಯ 13:58ನ್ನು ಓದಿಕೊಳ್ಳಿರಿ. ಅವಶ್ಯವಾಗಿ ನಂಬಿಕೆ ಇರಬೇಕು ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಈ ವಾಕ್ಯಗಳು ಹೇಳುವುದೇನು?**

---

---

ಸತ್ಯವೇದದಲ್ಲಿ ಆಶ್ಚರ್ಯಕರವಾದ ವಾಗ್ದಾನಗಳಿವೆ. ನಂಬಿಕೆಯಿಂದ ದೇವರ ವಾಕ್ಯಗಳಲ್ಲಿರುವ ವಾಗ್ದಾನ ನೆರವೇರಲೆಂದು ನಾವು ಬೇಡಿಕೊಳ್ಳೋಣ. ಕ್ರಿಸ್ತನೇ ಈ ವಾಗ್ದಾನಗಳನ್ನು ಮಾಡಿದ್ದರಿಂದ ಅವುಗಳಲ್ಲಿ ನಂಬಿಕೆಯಿದ್ದರೆ ಆ ವಾಗ್ದಾನಗಳಲ್ಲಿರುವ ಆಶೀರ್ವಾದಗಳು ನಮ್ಮದಾಗುತ್ತವೆ. ದೇವರು ತನ್ನ ವಾಕ್ಯದಲ್ಲಿ ವಾಗ್ದಾನ ಮಾಡಿರುವ ಹಾಗೆ ನಡೆದುಕೊಳ್ಳುವುದಕ್ಕೆ ಶಕ್ತನು ಎಂದು ನಂಬುವುದರಲ್ಲಿರುವ ಕೊರತೆಯೇ ನಮ್ಮ ಜೀವನಗಳಲ್ಲಿ ದೇವರ ವಾಗ್ದಾನಗಳು ನೆರವೇರುವುದನ್ನು ಮಿತಿಗೊಳಪಡಿಸಿಬಿಡುತ್ತವೆ. ದೇವರ ವಾಕ್ಯದಲ್ಲಿ ಕಂಡುಕೊಳ್ಳಬಹುದಾದ ನಿರೀಕ್ಷೆಯ ವಾಗ್ದಾನಗಳಿಗಾಗಿ ಹುಡುಕುತ್ತಿರುವವರ ಬಳಿಗೆ ಈ ವಾರ ನಿಮ್ಮನ್ನು ಕರೆದುಕೊಂಡು ಹೋಗುವಂತೆ, ದೇವರ ಹತ್ತಿರ ಬೇಡಿಕೊಳ್ಳಿರಿ.

**ಗುರುವಾರ** **ಆಗಸ್ಟ್ 13**

## ದೇವರ ವಾಕ್ಯವನ್ನು ಹಂಚಿಕೊಳ್ಳುವುದು

ಸುವಾರ್ತೆ ಇರುವುದೇ ಹಂಚಿಕೊಳ್ಳುವುದಕ್ಕಾಗಿ ನಿಮ್ಮ ಜೀವನದಲ್ಲಿ ಒಳ್ಳೇ ಸುದ್ದಿ ಕೇಳಿದಾಗ ನೀವು ಸಂತೋಷಪಟ್ಟ ದಿನಗಳನ್ನು ಕುರಿತು ಚಿಂತನೆ ಮಾಡಿ ನೋಡಿ. ಬಹುಶಃ ನಿಮ್ಮ ಮದುವೆ ನಿಶ್ಚಯವಾದ ದಿನ, ನಿಮಗೆ ಮಗು ಹುಟ್ಟಿದ ದಿನ, ಹೊಸ ಕೆಲಸ ಸಿಕ್ಕ ದಿನ, ಹೊಸ ಕಾರು ಅಥವಾ ಹೊಸ ಮನೆ ಕೊಂಡ ದಿನ ನೀವು ಹಂಚಿಕೊಂಡ ಹೊಸ ಸುದ್ದಿಗಳಾಗಿರಲಿಕ್ಕೂ ಸಾಕು. ಆ ಸುದ್ದಿಯನ್ನು ಹಂಚಿಕೊಳ್ಳುವುದರಲ್ಲಿ ನೀವು ಅದೆಷ್ಟು ಭಾವೋದ್ರೇಕಗೊಂಡಿದ್ದೀರಲ್ಲವೆ? ಆ ಸುದ್ದಿಯನ್ನು ಹಂಚಿಕೊಳ್ಳಲು ನೀವು ತಡ ಮಾಡಿರಲಿಲ್ಲ ಅಲ್ಲವೇ?

ಬೇರೆಯವರೊಂದಿಗೆ ನಮ್ಮ ಸಂತೋಷವನ್ನು ಹಂಚಿಕೊಳ್ಳುವುದೇ ಒಂದು ಸಂತೋಷ, ಆದರೆ ಇಡೀ ವಿಶ್ವಕ್ಕೆ ಇರುವುದು ಒಂದೇ ಒಂದು ಉತ್ತಮೋತ್ತಮ ಸುದ್ದಿ. ಅದೇ ಯೇಸುಕ್ರಿಸ್ತನ ಕಥೆ. ಆತನ ವಾಕ್ಯದಲ್ಲಿ ಹೊಸ ಒಳನೋಟಗಳನ್ನು ಕ್ರಿಸ್ತನಲ್ಲಿ ರಕ್ಷಣೆಯ ಬಗ್ಗೆ ಕಂಡುಕೊಂಡಾಗ, ನಮ್ಮ ಹೃದಯದಲ್ಲಿ ಉತ್ಸಾಹ ತುಂಬಿ ಹೊರಸೂಸುತ್ತದೆ. ಹಾಗಾದಾಗ ನಾವು ಅದನ್ನು ಯಾರಲ್ಲಿಯಾದರೂ

ಹೇಳಿಕೊಳ್ಳಬೇಕೆಂದು ಹಂಬಲಿಸುತ್ತೇವೆ. ಅಂದಿನ ಧಾರ್ಮಿಕ ನಾಯಕರು, ಅಪೋಸ್ತಲರ ಬೋಧನೆಯನ್ನು ನಿಲ್ಲಲೆತ್ನಿಸಿದಾಗ, ಪೇತ್ರನು– "**ನಾವಂತೂ ಕಂಡು ಕೇಳಿದ್ದನ್ನು ಹೇಳದೆ ಇರಲಾರೆವು**" ಎಂದು ಪ್ರಕಟಿಸಿದ್ದನು (ಅ.ಕೃ 4:20).

"ಎಷ್ಟು ಬೇಗ ಒಬ್ಬನು ಕ್ರಿಸ್ತನ ಬಳಿಗೆ ಬರುತ್ತಾನೋ, ಅವನು ಅಷ್ಟೇ ಬೇಗ ಇತರರಿಗೆ ಕ್ರಿಸ್ತನನ್ನು ಕುರಿತು ಹೇಳಬೇಕೆಂದು ಹಂಬಲಿಸುತ್ತಾನೆಂದರೆ, ಅವನು ಕ್ರಿಸ್ತನೊಂದಿಗೆ ಅದೆಂತಹ ಅಮೂಲ್ಯ ಸ್ನೇಹ ಬೆಳೆಯಿಸಿಕೊಂಡಿರುತ್ತಾನೆ ಅವನು ಎಂಬುದನ್ನು ನಾವು ಮನಗಾಣಬಹುದು. ರಕ್ಷಣೆಯ ಮತ್ತು ಸಂತೃಪ್ತ ಸತ್ಯವನ್ನು ತನ್ನ ಹೃದಯದಲ್ಲಿಯೇ ಅಡಗಿಸಿಕೊಂಡಿರಲಾಗದು. ನಾವು ಕ್ರಿಸ್ತನ ನೀತಿಯನ್ನು ವಸ್ತ್ರವಾಗಿ ಧರಿಸಿಕೊಂಡಾಗ ಮತ್ತು ಆತನ ಆತ್ಮನು ಉತ್ಸಾಹದಿಂದ ತುಂಬಿಕೊಂಡಾಗ, ನಮ್ಮಿಂದ ಸುಮ್ಮನಿರಲು ಸಾಧ್ಯವಾಗುವುದೇ ಇಲ್ಲ"– ಎಲೆನ್ ಜಿ ವೈಟ್, ಸ್ಟೆಪ್ಸ್ ಟು ಕ್ರೈಸ್ಟ್, ಪುಟ 78.

ರೋಮಾಪುರದವರಿಗೆ ಬರೆದ ಪತ್ರಿಕೆ : 1–14–16 ವಚನಗಳಲ್ಲಿ ಪೌಲ ಹೀಗೆ ಬರೆದಿದ್ದಾನೆ : "**ಹೀಗಿರುವುದರಿಂದ ರೋಮಾಪುರದಲ್ಲಿರುವ ನಿಮಗೆ ಸಹ ಸುವಾರ್ತೆಯನ್ನು ಸಾರುವುದಕ್ಕೆ ನಾನಂತೂ ಸಿದ್ಧನಾಗಿದ್ದೇನೆ. ಸುವಾರ್ತೆಯ ವಿಷಯದಲ್ಲಿ ನಾನು ನಾಚಿಕೊಳ್ಳುವವನಲ್ಲ. ಆ ಸುವಾರ್ತೆಯು ದೇವರ ಬಲ ಸ್ವರೂಪವಾಗಿದ್ದು ಮೊದಲು ಯೆಹೂದ್ಯರಿಗೆ ಆಮೇಲೆ ಗ್ರೀಕರಿಗೆ ಅಂತೂ ನಂಬುವವರೆಲ್ಲರಿಗೂ ರಕ್ಷಣೆ ಉಂಟುಮಾಡುವಂಥದಾಗಿದೆ**".

ಅಪೋಸ್ತಲನಾದ ಪೌಲನು ತನ್ನ ಪರಿವರ್ತನೆಯ ಕಥೆಯನ್ನು ಹೇಳುವುದಕ್ಕೆ ಯಾವತ್ತೂ ಆಯಾಸಗೊಂಡವನಲ್ಲ. ಯೇಸುಕ್ರಿಸ್ತನಲ್ಲಿ ಆತನ ಹೃದಯದ ಸಂತೋಷ ಪ್ರವಾಹದ ಹಾಗೆ ತುಂಬಿ ಹರಿಯುತ್ತಿತ್ತು. ಅವನಿಗೆ ಸುವಾರ್ತೆ ಇರುವುದೇ ಹಂಚಿಕೊಳ್ಳುವುದಕ್ಕಾಗಿ. ಅವನು ಅದನ್ನು ಹಂಚಿಕೊಳ್ಳದೆ ಸುಮ್ಮನಿರುವವನೇ ಅಲ್ಲ.

ದೇವರ ವಾಕ್ಯವನ್ನು ಹಂಚಿಕೊಳ್ಳುವುದರಲ್ಲಿ ಯೆಶಾಯ 50:4; ಪ್ರಸಂಗಿ 3:1 ಮತ್ತು 2 ತಿಮೊಥಿ 4:2 ನಮಗೆ ಕೊಡುವ ಮಹತ್ವಕಾರಿ ತತ್ವಗಳು ಯಾವುವು?

ಯೇಸು ಸ್ವಾಮಿಗೂ ಮತ್ತು ಆತನ ಸೇವೆಗೂ ನಮ್ಮ ಜೀವಿತಗಳನ್ನು ಒಪ್ಪಿಸಿಕೊಟ್ಟಾಗ, ಆತನು "**ಅನುಕೂಲವಾದ ಕಾಲದಲ್ಲಿಯೂ ಅನುಕೂಲವಿಲ್ಲದ ಕಾಲದಲ್ಲಿಯೂ**" ದೇವರ ವಾಕ್ಯವನ್ನು ಸಾರುವುದಕ್ಕೆ ನಮಗೆ ಸದಾವಕಾಶದ ಬಾಗಿಲುಗಳನ್ನು ತೆರೆಯುವನು. ಅಥವಾ ಯಾರ್ಯಾರ ಹೃದಯಗಳನ್ನು ಆತನೇ ತೆರೆದಿದ್ದಾನೆಯೋ, ಅಂತಹವರಿಗೆ ಸುವಾರ್ತೆ ಸಾರಲು ತಕ್ಕ ಸಮಯದಲ್ಲಿ ಸದಾವಕಾಶ ಕಲ್ಪಿಸಿಕೊಡುವನು. ನಮ್ಮ ಸಾಕ್ಷಿ ಕೊಡುವ ಸಂದರ್ಭಗಳಲ್ಲಿ ಮೂರು ಸತ್ಯವೇದ ತತ್ವಗಳನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕು : ಏನು ಹೇಳಬೇಕು, ಅದನ್ನು ಹೇಗೆ ಹೇಳಬೇಕು, ಮತ್ತೆ ಯಾವಾಗ ಹೇಳಬೇಕು.

**ಯಾರೊಂದಿಗೆ ನೀವು ಸಹವಾಸ ಬೆಳೆಯಿಸಿಕೊಂಡಿದ್ದೀರಿ, ಮತ್ತು ನೀವು ಅವರಿಗೆ ಉತ್ತಮವಾದ ಸಾಕ್ಷಿಯಾಗುವುದು ಹೇಗೆ?**

**ಶುಕ್ರವಾರ** **ಆಗಸ್ಟ್ 14**

**ಹೆಚ್ಚಿನ ಚಿಂತನೆ :** ವೈಟಮ್ಮನವರ ಸ್ಟೆಪ್ಸ್ ಟು ಕ್ರೈಸ್ಟ್ ಪುಸ್ತಕದ "ಎ ನಾಲೆಜ್ ಆಫ್ ಗಾಡ್" ಎಂಬ ಅಧ್ಯಾಯವನ್ನೂ (ಪುಟ 87–91) ಗಾಸ್ಪೆಲ್ ವರ್ಕರ್ಸ್ ಪುಸ್ತಕದ "ಬೈಬಲ್ ರೀಡಿಂಗ್ಸ್ ವಿತ್ ಫ್ಯಾಮಿಲಿಸ್" ಎಂಬ ಅಧ್ಯಾಯವನ್ನೂ (ಪುಟ 192–193) ಮತ್ತು ಎವಾಂಜಲಿಸಮ್ ಪುಸ್ತಕದಿಂದ, "ಬೈಬಲ್ ವರ್ಕ್ ಟೆಕ್ನಿಕ್ಸ್" ಎಂಬ ಅಧ್ಯಾಯವನ್ನು (ಪುಟ 481–486) ಓದಿಕೊಳ್ಳಿರಿ.

ದೇವರು ನಮ್ಮ ಸುತ್ತಮುತ್ತಲಿರುವವರೆಲ್ಲರ ಹೃದಯಗಳಲ್ಲಿ ಕೆಲಸ ಮಾಡುತ್ತಿದ್ದಾನೆ. ದೇವರು ಈಗಾಗಲೇ ಎಲ್ಲ ಕೆಲಸ ಮಾಡುತ್ತಿದ್ದಾನೆ ಎಂಬುದನ್ನು ಮನಗಾಣುವ ಆಧ್ಯಾತ್ಮಿಕ ವಿವೇಚನೆಯಿದ್ದರೆ, ಆತನ ವಾಕ್ಯವನ್ನು ಹಂಚಿಕೊಳ್ಳಲು ಸಿಗಬಹುದಾದ ಅವಕಾಶಕ್ಕಾಗಿ ದಿನನಿತ್ಯ ಅವಲೋಕಿಸುತ್ತಿರುತ್ತೇವೆ. ದೇವರು ಹೃದಯುವೆಂಬ ಭೂಮಿಯ ಮಣ್ಣನ್ನು ಸಿದ್ಧಗೊಳಿಸಿದಾಗ, ನಮಗೆ ಸುವಾರ್ತೆಯೆಂಬ ಬೀಜ ಬಿತ್ತಲು ಸದಾವಕಾಶ ಸಿಗುತ್ತದೆ. ಯೇಸುಕ್ರಿಸ್ತನು ಭೇಟಿಯಾಗುವ ಮುನ್ನವೇ, ಪವಿತ್ರಾತ್ಮ ದೇವರು, ನಿಕೋದೇಮನ, ಬಾವಿಯ

ಬಳಿಯ ಸ್ತ್ರೀಯ, ರಕ್ತಕುಸುಮ ರೋಗದಿಂದ ಬಂದ ಸ್ತ್ರೀಯ, ಶಿಲುಬೆಯ ಮೇಲಿನ ಕಳ್ಳನ, ರೋಮ್‌ನ ಶತಾಧಿಪತಿಯ, ಹಾಗೂ ಇನ್ನಿತರ ಆತ್ಮಗಳನ್ನು ಸಿದ್ಧಗೊಳಿಸಿದ್ದನು. ಅವರ ಜೀವನದ ಸನ್ನಿವೇಶಗಳ ಮೂಲಕ ಮತ್ತು ಪವಿತ್ರಾತ್ಮ ದೇವರ ಪ್ರಭಾವದಿಂದಾಗಿ ಅವರು ಕ್ರಿಸ್ತನ ಸಂದೇಶವನ್ನು ಸ್ವೀಕಾರ ಮಾಡಿಕೊಳ್ಳಲು ಸಿದ್ಧರಾಗಿದ್ದರು.

ಜನರನ್ನು ಉದ್ದೇಶಿಸಿ– "ನಾವು ನಿಮ್ಮೊಂದಿಗೆ ಪ್ರಾರ್ಥನೆ ಮಾಡಬಹುದೇ?" ಎಂದು ಕೇಳಬಹುದೇ ಎಂಬ ಮನಸ್ಸಿನ ಹೊಯ್ದಾಟ ನಮ್ಮಲ್ಲಿ ಇರಬಹುದು. ಅವರೊಂದಿಗೆ ದೇವರ ವಾಗ್ದಾನಗಳನ್ನು ಹಂಚಿಕೊಳ್ಳಿರಿ, ಅಥವಾ ಓದಲು ಸಾಹಿತ್ಯವನ್ನು ಕೊಡಿರಿ. ಬಹಳಷ್ಟು ಸಲ, ನಮಗಾದ ಪ್ರಭಾವಕಕ್ಕನುಸಾರವಾಗಿ ನಮ್ಮ ನಂಬಿಕೆಯನ್ನು ಇತರರೊಂದಿಗೆ ಹಂಚಿಕೊಳ್ಳುತ್ತೇವೆ ಅಂದುಕೊಳ್ಳುತ್ತೇವೆ. ಆದರೆ ಅದು ಹಾಗಲ್ಲ. ನಮ್ಮ ಮೇಲೆ ಪ್ರಭಾವ ಬೀರುವ ಪವಿತ್ರಾತ್ಮ ದೇವರು, ನಮ್ಮ ಸಾಕ್ಷಿಯನ್ನು ಸ್ವೀಕಾರ ಮಾಡುವಂತೆ, ನಾವು ಯಾರೊಂದಿಗೆ ವಾಕ್ಯ ಹಂಚಿಕೊಳ್ಳಬೇಕು ಅಂದುಕೊಂಡಿರುತ್ತೇವೋ ಅವರ ಹೃದಯದಲ್ಲಿಯೂ ಪ್ರಭಾವ ಬೀರಿ, ಅವರನ್ನು ಸಿದ್ಧಪಡಿಸಿರುತ್ತಾನೆ.

## ಚರ್ಚಿಸಬೇಕಾದ ಪ್ರಶ್ನೆಗಳು

1. ಯಾವುದೋ ಒಂದು ವಿಷಯದಲ್ಲಿ ಅಪರಾಧಿ ಮನೋಭಾವ ಬೆಳೆಯಿಸಿಕೊಂಡು, ದೇವರಿಂದ ಕ್ಷಮಾಪಣೆ ಪಡೆಯಬೇಕೆಂದು ಯಾರಾದರೂ ಬಂದು ನಿಮ್ಮ ಹತ್ತಿರ ಮಾತಾಡಿದರೆ, ಅವರಿಗೆ ನೀವು ಕೊಡುವ ಸಲಹೆ ಏನು? ಅವರೊಂದಿಗೆ ಯಾವ ಯಾವ ಸತ್ಯವೇದದ ವಾಕ್ಯಗಳನ್ನು ಹಂಚಿಕೊಳ್ಳುವಿರಿ? ಈ ವಿಷಯದಲ್ಲಿ ನಿಮ್ಮ ಸ್ವಂತ ಅನುಭವವೇನು?

2. ದೇವರು ತನ್ನ ಸತ್ಯ ಯಾರಿಗೆ ತಿಳಿಯಬೇಕೆಂದು ಹಂಬಲಿಸುತ್ತಾನೋ ಆ ಜನರನ್ನು ಆತನು ನಮ್ಮ ಜೀವನದಲ್ಲಿ ಬರಮಾಡುವನು. ದೇವರ ಈ ರೀತಿಯ ನಡೆಸುವಿಕೆಗೆ ನಾವು ಅದೆಷ್ಟು ಸೂಕ್ಷ್ಮ ಮನಸ್ಸಿನವರಾಗಿರುತ್ತೇವೆ?

3. ಸೃಷ್ಟಿ ಮತ್ತು ಸೃಷ್ಟಿಯ ಕಥೆಯಲ್ಲಿ ಪ್ರಕಟಗೊಂಡಿರುವ ದೇವರ ಸೃಷ್ಟಿಯ ಶಕ್ತಿ ಮತ್ತು ದೇವರ ವಾಕ್ಯಗಳನ್ನು ಕುರಿತು ಚಿಂತನೆ ನಡೆಸಿರಿ. ವಿಶ್ವ ಅದೆಷ್ಟು ದೊಡ್ಡದು ಮತ್ತು ವಿಶಾಲವಾದದ್ದೆಂದರೆ ಅದು ನಮ್ಮ ಕಲ್ಪನೆಯ ಪರಿಧಿಯೊಳಗೆ ಬಾರದು. ಅದು ಕಲ್ಪನಾತೀತ. ನಮ್ಮಿಂದ ಗ್ರಹಿಸಲಾಗದು. ಸೃಷ್ಟಿಯೇ ಇಷ್ಟು ದೊಡ್ಡದಾಗಿರಬೇಕಾದರೆ ಇನ್ನು ಅದನ್ನು ಸೃಷ್ಟಿಸಿದ ದೇವರು ಇನ್ನೆಷ್ಟು ದೊಡ್ಡವನಾಗಿರಬಹುದಲ್ಲವೇ? ನಾವು ಸೇವೆಗೈಯ್ಯುತ್ತಿರುವ ದೇವರು ಮಹಾಶಕ್ತಿಯುಳ್ಳವನೆಂಬ ಭಾವ ನಮಗೆ ಅದೆಷ್ಟು ಸಮಾಧಾನ ಕೊಡಬಹುದಲ್ಲವೇ? ಆತನು ಮಹಾಶಕ್ತಿಯುಳ್ಳವನು ಮಾತ್ರವಲ್ಲ, ನಮ್ಮನ್ನು ಬಹಳವಾಗಿ ಪ್ರೀತಿಸುವವನೂ ಆಗಿದ್ದಾನೆ. ದೇವರ ವಿಷಯದಲ್ಲಿ ನಾವು ಇಷ್ಟೆಲ್ಲಾ ತಿಳಿದುಕೊಂಡೆವು. ಅವು ಎಷ್ಟರ ಮಟ್ಟಿಗೆ ನಮಗೆ ನಿರೀಕ್ಷೆಯನ್ನು ಕೊಡಬಲ್ಲವು? ಇಂತಹ ಜ್ಞಾನ, ಇತರರಿಗೆ ನಾವು ಉತ್ತಮವಾದ ಸಾಕ್ಷಿಗಳಾಗಲು ಸಹಾಯ ಮಾಡುವುದು ಹೇಗೆ?